**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 1321/2023**

**ಸಿ ಡಬ್ಲೂ -4**
**ಪಿ ಡಬ್ಲೂ -3**

**ಸಾಕ್ಷಿಯ ಹೆಸರು - ನಿಖಿಲ್**
**ತಂದೆಯ ಹೆಸರು - ತಿರುಮಲೇಶ್**
**ವಯಸ್ಸು - 28 ವರ್ಷಗಳು**
**ಉದ್ಯೋಗ - ಖಾಸಗಿ ಕೆಲಸ**
**ವಾಸಸ್ಥಳ - ಕಮಲಾಪುರ**

**ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ 1 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿಃ 1(ಸಿ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು 2022 ರಲ್ಲಿ ಹಂಪಿ ಪೋಲಿಸ್ ಠಾಣೆಂದಯಲ್ಲಿ ಮಾಡಿರುತ್ತೇನೆ. ಪೋಲಿಸರು ನನ್ನನ್ನು ಕರೆದು ಸಹಿ ಮಾಡು ಎಂದ್ದಿದ್ದರಿಂದ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಮತ್ತು ಯಾವುದೇ ವಸ್ತು ಜಪ್ತುಪಡಿಸಿಕೊಂಡಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ,

ಈಗ ನಾನು ನೋಡುತ್ತಿರುವ 2 ಪೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಪೋಟೋಗಳನ್ನು ಈಗಾಗಲೇ ಒಟ್ಟಾಗಿ ನಿಪಿಃ 2 ಎಂದು

ಗುರುತಿಸಲಾಯಿತು. ನಿಪಿಃ **2** ರ ಫೋಟೋವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 19-09-2022 ರಂದು ಹಂಪಿ ಪೋಲಿಸರು ನನ್ನನ್ನು ಮತ್ತು ಚಾಸಾ -5 ರವರನ್ನು ಠಾಣೆಗೆ ಕರೆಯಿಸಿ ಚಾಸಾ -1 ರವರನ್ನು ಪರಿಚಯಿಸಿದ್ದರು ಅಂದರೆ ಸರಿಯಲ್ಲ. ಚಾಸಾ -1 ರವರು ನ್ಯಾಯಾಲಯದ ಮುಂದೆ ಇರುವ ಆರೋಪಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಒಂದು ಪಡಿತರ ಅಕ್ಕಿ ಚೀಲಗಳಿದ್ದ ಪ್ಯಾಸೆಂಜರ್ ಆಟೋ ಸಂಖ್ಯೆ ಕೆ ಎ 35 ಎ 2153 ಯನ್ನು ಬೆಳಿಗೆಗ 9.30 ಗಂಟೆಗೆ ಹೊಸ ಮಲಪನಗುಡಿ ಗ್ರಾಮದಲ್ಲಿ ಹಿಡಿದಿರುವುದಾಗಿ ಮತ್ತು ಸದರಿ ಆರೋಪಿಯನ್ನು ಹಾಗೂ ಆಟೋವನ್ನು ಬೆಳಿಗ್ಗ 11.00 ಗಂಟೆಗೆ ಠಾಣೆಯ ಪಿ ಎಸ್ ಐ ರವರ ಮುಂದ ಹಾಜರು ಪಡಿಸಿದರು ಎಂದು ತಿಳಿಸಿದರು ಅಂದರೆ ಸರಿಯಲ್ಲ. ನಮ್ಮ ಸಮಕ್ಷಮ 8 ಅಕ್ಕಿ ಪಡಿತರ ಚೀಲಗಳನ್ನು ಮತ್ತು ಆಟೋವನ್ನು ಜಪ್ತ ಪಡಿಸಿಕೊಳ್ಳಲಾಗಿತ್ತು ಅಂದರೆ ಸರಿಯಲ್ಲ. ಪ್ರತಿ ಅಕ್ಕಿ ಚೀಲವು 40 ಕೆಜಿ ತೂಕದ್ದಾಗಿತ್ತು ಅಂದರೆ ಸರಿಯಲ್ಲ. ಸದರಿ ಚೀಲಗಳಿಂದ 1 ಕೆ ಜಿ ಯಷ್ಟು ಮಾದರಿ ಅಕ್ಕಿಯನ್ನು ತೆಗೆಯಲಾಗಿತ್ತು ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ಆ ದಿನ ಸ್ಥಳದಲ್ಲಿ ಹಾಜರಿದ್ದ ಅಂದರೆ ಸರಿಯಲ್ಲ. ಮುದ್ದೆಮಾಲು 1 ರ ಚೀಲದಲ್ಲಿಯೇ ಮಾದರಿ ಅಕ್ಕಿಯನ್ನು ತೆಗೆಯಲಾಗಿತುತ ಅಂದರೆ ಸರಿಯಲ್ಲ. ನಿಪಿಃ 2 ರ ಫೋಟೋಗಳನ್ನು ಆಗಲೇ ತೆಗೆಯಲಾಗಿದೆ

ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಸದರಿ ಪಂಚನಾಮೆ ಮಾಡಿ ಆಟೋ ಹಾಗೂ ಅಕ್ಕಿ ಚೀಲಗಳನ್ನು ಮತ್ತು ಮಾದರಿ ಅಕ್ಕಿಯನ್ನು ಜಪ್ತು ಪಡಿಸಿಕೊಂಡಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎನ್ ಎಸ್ ಎಚ್ ವಕೀಲರಿಂದಃ** ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.